ಇ) ರಾಜ್ಯದಲ್ಲಿ ಪತ್ರಕರ್ತರಿಗೆ ಅನ್ಯಾಯ ಒದಗದಂತೆ ಸರ್ಕಾರವು 'ಪಾಲೀಕರ್ ಏತೀರ್ಪು ಕಾವಲು ಸಮಿತಿ' ರಚಿಸಿದೆಯೇ?

ಈ) ಪತ್ರಕರ್ತರ ಹಾಗೂ ಆಡಳಿತ ವರ್ಗದವರ ಮೇಲೆ ಸರ್ಕಾರವು ನಿಯಮಿತವಾಗಿ ಪರಿಶೀಲಿಸುತ್ತಿದೆಯೆ

ಉ) ಹಾಗಿದ್ದಲ್ಲಿ ಶೋಧಿಸಿದ ಒಟ್ಟು ಸಂಖ್ಯೆ ತಪ್ಪಿತಸ್ಥರು, ಹಾಗೂ ಅಂಥವರ ಮೇಲೆ ಕ್ರಮ ಕೈಗೊಂಡ ಸಂಖ್ಯೆ?

ಶ್ರೀ ಡಿ. ಮಂಜುನಾಥ (ಮಾನ್ಯ ಕಾರ್ಮಿಕ ಸಚಿವರು).—

ಅ) ೫೩ ವೃತ್ತ ಪತ್ರಿಕೆಗಳು.

ಆ) ಏತೀರ್ಪುಗಳನ್ನು ಆಚರಣೆಗೆ ತರಲು ಸತತವಾಗಿ ಆಡಳಿತ ವರ್ಗದವರನ್ನು ಒತ್ತಾಯಿಸಲಾಗುತ್ತಿದೆ.

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಹೌದು.

ಉ) ಉದ್ಭವಿಸುವುದಿಲ್ಲ.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ಕಂದಾಯ ಮಂತ್ರಿಗಳ ಹೆಸರಿನ ಮುಂದೆ ಇರತಕ್ಕಂಥ ಎರಡು ನೋಟಿಫಿಕೇಷನ್‌ಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಶ್ರೀ ಪಿ ಜಿ.ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ಇರುವ ಕಾಗದಪತ್ರಗಳನ್ನು ಸಭೆಯ ಮುಂದೆ ಇಡಲಿಕ್ಕೆ ತಮ್ಮ ಅಪ್ಪಣೆಯನ್ನು ಕೋರುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಪರದಿಯನ್ನೊಪ್ಪಿಸುವುದು

ಶ್ರೀ ಎಸ್.ಕೆ. ಕಾಂತಾ.—ಅಧ್ಯಕ್ಷರೇ, ಕರ್ನಾಟಕ ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ ಶಿಫಾರಸ್ಸಿನ ಮೇಲೆ ಸರ್ಕಾರದವರು ಕೈಗೊಂಡ ಕ್ರಮದ ಬಗ್ಗೆ, ಸಾರ್ವಜನಿಕ ಉದ್ದಿಮೆಗಳ ಸಮಿತಿಯು ೨೩ನೇ ವರದಿಯನ್ನು ನಾನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ವರದಿಯನ್ನು ಮಂಡಿಸಲಾಗಿದೆ.

ಪ್ರಕಟಣೆ

ಅಧ್ಯಕ್ಷರು.—ರೈಲ್ವೆ ಪೋಲೀಸ್ ಸೂಪರಿಂಟೆಂಡೆಂಟ್, ಬೆಂಗಳೂರು ಇವರಿಂದ ಈ ಕೆಳಕಂಡ ಸಂದೇಶಗಳು ನನಗೆ ಬಂದಿವೆ.

(೧) ವಿಧಾನಸಭಾ ಸದಸ್ಯರಾದ ಶ್ರೀ ಪಂಪಾಪತಿಯವರನ್ನು ಕರ್ನಾಟಕ ಪೋಲೀಸ್ ಕಾಯ್ದೆಯ ೭೧ನೇ ಕಲಮಿನ ಮೇರೆಗೆ ದಾವಣಗೆರೆಯಲ್ಲಿ ದಿನಾಂಕ ೨೬ನೇ ಫೆಬ್ರುವರಿ, ೧೯೮೬ರಂದು ಬೆಳಿಗ್ಗೆ ಬಂಧಿಸಿ ದಾವಣಗೆರೆ ರೈಲ್ವೆ ಪೋಲೀಸ್ ಠಾಣೆಯಲ್ಲಿಟ್ಟುಕೊಂಡಂ ಅದೇ ದಿನ ಬಿಡುಗಡೆ ಮಾಡಲಾಯಿತು.